**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ .ಎಂ. ಎಫ್. ಸಿ ನ್ಯಾಯಾಲಯ ಸಿಂದಗಿ**

ಸಿ.ಸಿ.ನಂಬರ್ : 288-2018

ಪಿ.ಡಬ್ಲ್ಯೂ : ಸಿ.ಡಬ್ಲ್ಯೂ

| | | |
|---|---|---|
| ಸಾಕ್ಷಿದಾರರ ಹೆಸರು | : | |
| ತಂದೆಯ ಹೆಸರು | : | |
| ವಯಸ್ಸು | : | ವರ್ಷ |
| ಉದ್ಯೋಗ | : | |
| ವಾಸಸ್ಥಳ | : | |
| ಸಮಯ | : | |

ಸಾಕ್ಷಿಗೆ ಇಂದು ದಿನಾಂಕಃ 10-07-2026 ರಂದು ಪ್ರಮಾಣೀಕರಿಸಲಾಯಿತು.

**ಮುಖ್ಯವಿಚಾರಣೆಃ ಎ.ಪಿ.ಪಿ. ರವರಿಂದ**

ನನಗೆ ಚಾ ಸಾ 1,4,5,8 ಮತ್ತು 9 ರವರ ಪರಿಚಯ ಇರುವುದಿಲ್ಲ. 1 ನೇ ಆರೋಪಿಯ ಪರಿಚಯ ಇರುವುದಿಲ್ಲ. ನಾನು ಯಾವುದೇ ಗಲಾಟೆ ನೋಡಿಲ್ಲ ಮತ್ತು ಬಿಡಿಸಿಲ್ಲ. ನನಗೆ ಪ್ರಕರಣದ ಬಗ್ಗೆ ಮಾಹಿತಿ ಇರುವುದಿಲ್ಲ. ಪೋಲಿಸರ ಮುಂದೆ ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ.

ನಾನು ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ ಆತ ಸದ್ಯ ಗೈರು ಹಾಜರಿದ್ದು ವಕೀಲರು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಗುರುತಿಸುವಿಕೆ ಕುರಿತು ಯಾವುದೇ ತಕರಾರು ಇರುವುದಿಲ್ಲ ಎಂದು ನುಡಿದಿರುತ್ತಾರೆ.

**(ಈ ಹಂತದಲ್ಲಿ ಎ.ಪಿ.ಪಿ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೇಳಿರುತ್ತಾರೆ, ಅನುಮತಿ ನೀಡಲಾಯಿತು).**

**ಪಾಟೀಸವಾಲುಃ ಎ.ಪಿ.ಪಿ. ರವರಿಂದಃ**

ದಿನಾಂಕ 13-05-2016 ರಂದು ನಾನು ಪೋಲಿಸರಿಗೆ ನೀಡಿರುವ ಹೇಳಿಕೆ ಏನೆಂದರೆ ದಿನಾಂಕ 11-05-2016 ರಂದು ನಾನು ಮತ್ತು ನಮ್ಮ ಊರಿನ ಚಾ ಸಾ 4 ಮತ್ತು 5 ರವರು ಕೂಡಿಕೊಂಡು ಚಾ ಸಾ 1 ರವರ ಹೊಲಕ್ಕೆ ಕೆಲಸಕ್ಕೆ ಹೋಗಿದ್ದು ಮದ್ಯಾಹ್ನ 3.30 ಗಂಟೆ ಸುಮಾರಿಗೆ ಚಾ ಸಾ 1 ರವರ ಹೊಲದ ದಕ್ಷಿಣ ಬಾಂದಿನಲ್ಲಿ ಜಗಳ ಆಗುತ್ತಿದ್ದ ಶಬ್ದ ಕೇಳಿ ನಾವು ಹೋಗಿ ನೋಡಲಾಗಿ ಚಾ ಸಾ 1 ರವರ ಅತ್ತೆ ಅವರ ಗಂಡ ಹಾಗೂ ಅವರ ಮಕ್ಕಳು ಎಲ್ಲರೂ ಸೇರಿಕೊಂಡು ಚಾ ಸಾ 1 ರವರಿಗೆ ಈ ಒಡ್ಡನ್ನು ಯಾರಿಗೆ ಹೇಳಿ ಹಾಕಿಸಿರುತ್ತೀಯಾ ಎಂದು ಜಗಳ ತೆಗೆದು ಅವಾಚ್ಯ ಶಬ್ದಗಳಿಂದ ಬೈಯುತ್ತಿದ್ದು, ಆಗ 3 ನೇ ಆರೋಪಿಯು ಚಾ ಸಾ 1 ರವರಿಗೆ ಕೈಯಿಂದ ಹೊಡೆದು ಪ್ರಾರಂಭಸಿದ್ದು ಆಗ 2 ನೇ ಆರೋಪಿ ಕಲ್ಲನ್ನು ತೆಗೆದುಕೊಂಡು ಸದರಿಯವರ ಸೊಂಟಕ್ಕೆ ಹೊಡೆದಿದ್ದು, 4 ನೇ ಆರೋಪಿಯು ಅಲ್ಲೆ ಇದ್ದ ಬಡಿಗೆಯಿಂದ ಚಾ ಸಾ 1 ರವರ ಬಲಗಾಲಿನ ಮೊಣಕಾಲಿನ ಕೆಳಗೆ ಹೊಡೆದಿದ್ದು, 1 ನೇ ಆರೋಪಿ ಆಕೆಯು ಸಹ ಅಲ್ಲೆ ಬಿದ್ದ ಕಲ್ಲನ್ನು ತೆಗೆದುಕೊಂಡು ಚಾ ಸಾ 1 ರವರ ಬೆನ್ನಿಗೆ ಹಲ್ಲೆ ಮಾಡಿದ್ದು, 5 ನೇ ಆರೋಪಿ ಚಾ ಸಾ 1 ರವರಿಗೆ ಕೈಯಿಂದ ಹೊಡಿ ಬಡಿ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನಾನು ಮತ್ತು ಚಾ ಸಾ 8 ರವರು ಓಡಿ ಹೋಗಿ ಜಗಳ ಬಿಡಿಸಿರುತ್ತೇವೆ ಎಂದರೆ ಸರಿಯಲ್ಲ. ಈ ವಿಷಯವಾಗಿ ಚಾ ಸಾ 1 ರವರು ದೂರನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲ. ಈ ಮೇಲಿನಂತೆ ಪೋಲಿಸರ ಮುಂದೆ ಹೇಳಿಕೆ

ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ನಿರಾಕಾರಿಸಿದ ಹೇಳಿಕೆ ಭಾಗವನ್ನು ನಿಪಿ 7 ಎಂದು ಗುರುತಿಸಲಾಯಿತು. ನನಗೆ ನಿಪಿ 7ರ ವಿಷಯ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಃ ಆರೋಪಿತರ ಪರ ವಕೀಲರು ಯಾವುದೇ ಪಾಟೀಸವಾಲು ಇಲ್ಲ ಎಂದಿದ್ದರಿಂದ ಪಾಟೀಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆಃ ಇಲ್ಲ.**

(ಸಾಕ್ಷಿಯ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೇ ಸರಿ ಅದೆ.

ಸಿವಿಲ್ ನ್ಯಾಯಾಧೀಶರು ವ
ಜೆ ಎಂ ಎಫ್ ಸಿ, ಸಿಂದಗಿ.